AKSHARASURYA
E-ISSN: 2583-620X
Peer-Reviewed, Multi Lingual E-Journal
Volume – 02, Issue – 03, March 2023.

# ಡಾ. ರಂ. ಶ್ರೀ. ಮುಗಳಿರವರ ವಿಮರ್ಶಾ ಸಾಹಿತ್ಯ : ಒಂದು ನೋಟ

**ಡಾ. ಎಸ್. ಎಂ. ಗೋಪಿ**
ಕನ್ನಡ ಸಹಾಯಕ ಪ್ರಾಧ್ಯಾಪಕ
ರಾಮನಗರ ಸ್ನಾತಕೋತ್ತರ ಕೇಂದ್ರ,
ಬೆಂಗಳೂರು ವಿಶ್ವವಿದ್ಯಾಲಯ
email : gopi7519@gmail.com

ಡಾ. ರಂ. ಶ್ರೀ. ಮುಗಳಿರವರು ಸುಪ್ರಸಿದ್ಧ ಸಾಹಿತಿಗಳು ಮತ್ತು ವಿದ್ವಾಂಸರು. ಇವರು ಕಥೆ, ಕವನ, ಕಾದಂಬರಿ, ನಾಟಕ, ವಿಮರ್ಶೆ ಮೊದಲಾದ ಪ್ರಕಾರಗಳಲ್ಲಿ ಗಣನೀಯ ಸೇವೆಸಲ್ಲಿಸಿದ್ದಾರೆ. ಇವರು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಮೊದಲ ಮುಖ್ಯಸ್ಥರಾಗಿದ್ದವರು. ಇವರು ಡಾ. ಜಿ. ಎಸ್. ಶಿವರುದ್ರಪ್ಪನವರ ಜೊತೆಯಲ್ಲಿ ಕನ್ನಡ ಸಾಹಿತ್ಯದ ಬೆಳವಣಿಗೆಗೆ ಅವಿರತವಾಗಿ ಶ್ರಮಿಸಿದ್ದಾರೆ. 'ಇವರ 'ಕನ್ನಡ ಸಾಹಿತ್ಯ ಚರಿತ್ರೆ' ಪುಸ್ತಕವು ಪ್ರತಿಯೊಬ್ಬ ಕನ್ನಡದ ಓದುಗರಿಗೆ ಚಿರಪರಿಚಿತವಾಗಿದ್ದು ಭಾರತದ ಸಾಹಿತ್ಯ ಅಕಾಡೆಮಿಯ ಬಹುಮಾನವನ್ನು ಗಳಿಸಿದೆ. ಕನ್ನಡ ಸಾಹಿತ್ಯಕ್ಕೆ ಡಾ. ರಂ.ಶ್ರೀ. ಮುಗಳಿರವರ ಕೊಡುಗೆ ಅನನ್ಯವಾದುದು. ಇವರ ವಿಮರ್ಶನ ಸಾಹಿತ್ಯವು ಮೌಲಿಕವಾಗಿದ್ದು ಅಧ್ಯಯನ ಯೋಗ್ಯವಾಗಿದೆ. ಈ ಹಿನ್ನೆಲೆಯಲ್ಲಿ ಮುಗಳಿರವರ ವಿಮರ್ಶನ ಸಾಹಿತ್ಯವನ್ನು ಪರಿಚಯ ಮಾಡಿಕೊಡುವುದು ಪ್ರಸ್ತುತ ಲೇಖನದ ಮುಖ್ಯ ಉದ್ದೇಶವಾಗಿದೆ.

ರನ್ನನ ಕೃತಿರತ್ನ, ಸಾಹಿತ್ಯೋಪಾಸನೆ, ಕನ್ನಡ ಸಾಹಿತ್ಯದಲ್ಲಿ ಸರಸ್ವತಿಯ ದರ್ಶನ, ತವನಿಧಿ, ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು, ವಿಮರ್ಶೆಯ ವ್ರತ, ಬೇಂದ್ರೆ ಕಾವ್ಯ, ಮಹಾಕೃತಿ ಮತ್ತು ಪುನರ್ನವೋದಯ – ಇವುಗಳು ಇವರ ಪ್ರಮುಖ ವಿಮರ್ಶಾಕೃತಿಗಳಾಗಿವೆ. ಪ್ರಸ್ತುತ ಲೇಖನದಲ್ಲಿ ಮುಗಳಿರವರ ಕೆಲವೊಂದು ಪ್ರಾತಿನಿಧಿಕ ಕೃತಿಗಳನ್ನು ವಿಶ್ಲೇಷಿಸುವ ಹಾಗೂ ಮುಗಳಿರವರ ವಿಮರ್ಶನ ಪ್ರಜ್ಞೆಯ ಬಹುಮುಖಿ ಆಯಾಮಗಳನ್ನು ಗುರುತಿಸುವ ಪ್ರಯತ್ನವಿದೆ. 'ಕನ್ನಡ ಸಾಹಿತ್ಯದಲ್ಲಿ ಸರಸ್ವತಿಯ ದರ್ಶನ' ಎಂಬ ಕೃತಿಯಲ್ಲಿ ಪ್ರಾಚೀನ ವೇದಗಳ ಕಾಲದಿಂದ ಇಲ್ಲಿನವರೆಗೆ ಸರಸ್ವತಿಯ ವರ್ಣನೆ ಹೇಗೆ ಮೂಡಿ ಬಂದಿದೆ ಎಂಬುವ ಅಂಶಗಳನ್ನು ಗುರುತಿಸಿದ್ದಾರೆ. ಇದಕ್ಕಾಗಿ ಮುಗಳಿರವರು ಸಾಕಷ್ಟು ಕೃತಿಗಳನ್ನು ನಿರಂತರವಾಗಿ ಅಧ್ಯಯನ ಮಾಡಿದ್ದಾರೆ. ವಿದ್ಯಾಧಿದೇವತೆಯಾದ ಸರಸ್ವತಿಯನ್ನು ಕನ್ನಡ ಕವಿಗಳು ಹೇಗೆ ಕಂಡಿದ್ದಾರೆ, ಕಂಡರಿಸಿದ್ದಾರೆ ಎಂಬುದನ್ನು ಸವಿಸ್ತಾರವಾಗಿ ವಿವರಿಸಿದ್ದಾರೆ. ಶ್ರೀ ವಿಜಯ, ಪಂಪ, ರನ್ನ, ನಾಗವರ್ಮ, ದುರ್ಗಸಿಂಹ ಮುಂತಾದ ಮಾರ್ಗಸಾಹಿತ್ಯಕಾರರಿಂದ ಹಿಡಿದು ಬಸವ, ಅಲ್ಲಮರಂತಹ ಶಿವಶರಣರು ಹಾಗೂ ಕುವೆಂಪು, ಮಾಸ್ತಿ, ಬೇಂದ್ರೆ ಮೊದಲಾದ ಆಧುನಿಕರವರೆಗೆ ಸಮಸ್ತ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಸರಸ್ವತಿಯು ಪ್ರಕೀರ್ತಳಾಗಿರುವ ಬಗೆಯ ವಿವೇಚನೆ ಇಲ್ಲಿದೆ. ತಮ್ಮ ಚಿಂತನೆಗೆ ಪೂರಕವಾದ ಹೆಚ್ಚಿನ ಮಾಹಿತಿಯನ್ನು ಪರಿಶಿಷ್ಟದ ರೂಪದಲ್ಲಿ ಕೊಟ್ಟಿದ್ದಾರೆ. ವೈದಿಕ ಪರಂಪರೆಯ ದೇವತೆಯಾದ ಸರಸ್ವತಿಯನ್ನು ಜೈನಕವಿಗಳು ತಮ್ಮ ಮತೀಯ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಚಿತ್ರಿಸಿದ್ದಾರೆ ಎನ್ನುವುದನ್ನು ಕುರಿತಾದ ಡಾ. ರಂ.ಶ್ರೀ. ಮುಗಳಿಯವರ ವಿಶ್ಲೇಷಣೆ ಅತ್ಯಂತ ನೂತನವೂ ಪಾಂಡಿತ್ಯಪೂರ್ಣವೂ ಆಗಿದೆ. 'ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು ಎನ್ನುವ ಭಾಗದಲ್ಲಿ ಕೃತಿ ವಿಮರ್ಶೆಯ ಕಾರ್ಯವು ಶಾಸ್ತ್ರೀಯವಾದ ರೀತಿಯಲ್ಲಿ ನಡೆಯಬೇಕಾದರೆ ಅನುಸರಿಸಬೇಕಾದ ಅಂಶಗಳು ಯಾವುವು ಎಂಬುದನ್ನು ಮುಗಳಿರವರು ಇಲ್ಲಿ ವಿಸ್ತೃತವಾಗಿ ಚರ್ಚಿಸಿದ್ದಾರೆ. ಕನ್ನಡದ ಅಭಿಜಾತ ಕೃತಿಗಳಾದ ಕವಿರಾಜಮಾರ್ಗ, ಗದಾಯುದ್ಧ, ಯಶೋಧರಚರಿತೆ ಮುಂತಾದವುಗಳ ಜೊತೆ ಜೊತೆಗೆ ಐ. ಎ. ರಿಚರ್ಡ್ಸ್, ಹಡ್ಸನ್, ಟಿ. ಎಸ್. ಎಲಿಯೆಟ್ ಮುಂತಾದ ಪಾಶ್ಚಾತ್ಯ ವಿದ್ವಾಂಸರ ಕೃತಿಗಳಲ್ಲಿನ ವಿವರಗಳನ್ನು ವಿಷಯ ನಿರೂಪಣೆಗೆ ಅವರು ಬಳಸಿಕೊಂಡಿದ್ದಾರೆ. ಸಾಹಿತ್ಯ ವಿಮರ್ಶೆಯೆನ್ನುವುದು ಪರಸ್ಪರ ಬೆನ್ನು ಚಪ್ಪರಿಸುವ ಸ್ಪರ್ಧೆಯೋ, ಕಂಡವರ ಮೇಲೆ ಕೆಸರೆರಚುವ ಹುನ್ನಾರವೋ, ಅರ್ಥವಾಗದ ಉದ್ದುದ್ದ ವಾಕ್ಯಗಳ ವ್ಯರ್ಥ ಶಬ್ದಜಾಲವೋ ಅಥವಾ ಕುರುಡರು ಆನೆಯನ್ನು ಬಣ್ಣಿಸಿದ ತೆರದಿ ಸ್ವಸಿದ್ಧಾಂತಗಳ ಪ್ರತಿಪಾದನೆಯ ಆಡುಂಬೊಲವೋ ಆಗಿರುವ ಈ ಕಾಲದಲ್ಲಿ ನಿಜವಾಗಿಯೂ ಸಾಹಿತ್ಯ ವಿಮರ್ಶಕನೊಬ್ಬ ಅನುಸರಿಸಬೇಕಾದ ಮಾರ್ಗದರ್ಶಕ ಸೂತ್ರಗಳು ಯಾವುವು ಎಂಬುದನ್ನು ಡಾ. ಮುಗಳಿರವರು ಈ ಕೃತಿಯಲ್ಲಿ ವಿಶದವಾಗಿ ಚರ್ಚಿಸಿದ್ದಾರೆ.

ಕವಿರಾಜಮಾರ್ಗ ಕೃತಿಯಲ್ಲಿ ಬರುವ ಸರಸ್ವತಿಯ ಪ್ರಾರ್ಥನೆಯ ಪದ್ಯ ವೈದಿಕ ಸಾಹಿತ್ಯದಲ್ಲಿ ಕಂಡುಬರುವ ವರ್ಣನೆಗಿಂತ ಭಿನ್ನವಾಗಿರುವುದನ್ನು ಮುಗಳಿರವರು ಗುರುತಿಸುತ್ತಾರೆ. ವೈದಿಕ ಪುರಾಣ ಸಂಪ್ರದಾಯದಲ್ಲಿ ಸರಸ್ವತಿ ಸರ್ವದಾ ಬ್ರಹ್ಮನ ಮುಖದಲ್ಲಿರುವಳು ಎಂದಿದ್ದರೆ, ಜೈನ ಸಂಪ್ರದಾಯದಲ್ಲಿ ಇದಿಲ್ಲ. ಈ ಬಗೆಯ ವ್ಯತ್ಯಾಸದಿಂದ ಕವಿರಾಜ ಮಾರ್ಗಕಾರನು ಜೈನಮತೀಯ ನಾಗಿರಬೇಕೆಂದು ತಿಳಿದುಕೊಳ್ಳಲು ಮೊದಲನೆಯ ಆಧಾರವು ದೊರೆಯುತ್ತದೆ. ಈ ಕೃತಿಯ ನಂತರ ಪಂಪನ ಕೃತಿಗಳಲ್ಲಿ ಸರಸ್ವತಿಯ ದರ್ಶನವಿದೆ. 'ಕವಿರಾಜಮಾರ್ಗ'ವು ಕಾವ್ಯಗುಣದಿಂದ ಕೂಡಿದ್ದರೂ ಲಕ್ಷಣ ಗ್ರಂಥ. ಉಪಲಬ್ಧಕಾವ್ಯ ಎಂಬ ದೃಷ್ಟಿಯಿಂದ ಪಂಪನ ಕೃತಿಗಳಿಗೆ ಆದ್ಯಮಾನ ದೊರೆಯುತ್ತದೆ. ಅವುಗಳಲ್ಲಿ ಬಂದಿರುವ ಸರಸ್ವತಿ ಸ್ತುತಿ ಕನ್ನಡ ಕಾವ್ಯ ಚರಿತ್ರೆಯಲ್ಲಿ ಮೊದಲನೆಯದಾಗಿದೆ. ಅದರಲ್ಲಿಯೂ 'ಆದಿಪುರಾಣ'ದಲ್ಲಿ ಬರುವ ಸ್ತುತಿ 'ಪರಮಜಿನೇಂದ್ರನ ವಾಣಿಯೇ ಸರಸ್ವತಿ, ಎಂದು ಪಂಪ ಜೈನ ಸಂಪ್ರದಾಯವನ್ನು ಅನುಸರಿಸಿ ವರ್ಣಿಸಿದ್ದಾನೆ. ಇದೇ ರೀತಿ ನಾಗವರ್ಮ, ಭಟ್ಟಾಕಳಂಕ, ಜನ್ನ ಮೊದಲಾದ ಕವಿಗಳು ಸ್ತುತಿಸಿರುವ ಸರಸ್ವತಿಯ ವರ್ಣನೆಯನ್ನು ತೌಲನಿಕವಾಗಿ ಮುಗಳಿರವರು ಚರ್ಚಿಸಿದ್ದಾರೆ. ದಾಸಕೂಟದ ವಾಙ್ಮಯದಲ್ಲಿ ಅನೇಕ ದಾಸರು ದೇವತಾಸ್ತುತಿಯ ಪದಗಳನ್ನು ಸರಸ್ವತಿಯನ್ನು ಪ್ರತ್ಯೇಕವಾಗಿ ಸ್ತುತಿ ಮಾಡಿದ್ದಾರೆ. ಪ್ರರಂದರದಾಸರು ಸರಸ್ವತಿಯನ್ನು ಏಳೆಂಟು ಸಲ ಕೊಂಡಾಡಿದ್ದಾರೆ. ಅವುಗಳಲ್ಲಿಯ ಹೆಚ್ಚು ಭಾಗ ನಾಮಸ್ಮರಣೆ ಅಥವಾ ಸಾಂಪ್ರದಾಯಿಕ ಸ್ತುತಿಯಿದೆ. 'ಶರಣು ಭಾರತೀದೇವಿಗೆ' ಶರಣು, 'ನಲಿದಾಡೆ ಎನ್ನ ನಾಲಿಗೆ ಮೇಲೆ', 'ಪಾಲಿಸೆಮ್ಮ ಮುದ್ದು ಶಾರದೆ' ಇಂತಹ ಪದ್ಯಗಳು ರಮ್ಯವಾಗಿವೆ. 'ಭಾರತೀದೇವಿ ತಾಯೆ' ಎಂಬ ಕೀರ್ತನೆಯಲ್ಲಿ ಮುಕ್ತಾಮುಕ್ತರೊಡೆಯಳೆ ತತ್ವಾಭಿಮಾನಿ' ಎಂಬ ವರ್ಣನೆಯಿದೆ. ಮುಕ್ತರು ಮುಕ್ತರಲ್ಲದವರು ಇಬ್ಬರಿಗೂ ಅವಳು ಒಡೆಯಳಾದವಳು ಎಂಬ ವಿಚಾರವು ಮನನೀಯವಾದುದೆ. ಸರಸ್ವತಿಯ ಅಂದರೆ ಸವಿನುಡಿಯ ನೆರವಿಲ್ಲದೆ ಯಾರೂ ಇರಲಾರರು. ಮುಕ್ತರು ಸಂಸಾರ ಮಾಯೆಯಿಂದ ಮುಕ್ತರಾದರೂ ಸರಸ್ವತಿಯ ಸ್ವಾಮ್ಯದಿಂದ ಮುಕ್ತರಾಗುವುದಿಲ್ಲ. ಅಮುಕ್ತರಂತೂ ಇನ್ನಿಷ್ಟು ಅವಳ ಅಂಕಿತಕ್ಕೆ ಒಳಗಾಗಿರುತ್ತಾರೆ. ಸಕಲ ಸಾಧನಕ್ಕೆಲ್ಲ ಸ್ಥಿತಿಗೊಳಿಸುವುದು ಭಕುತಿ ಕಾರಣ. ಹಾಗೆಯೇ ಕನಕದಾಸರ ಕೀರ್ತನೆಗಳಲ್ಲಿ ಸರಸ್ವತಿಯ ಪ್ರತ್ಯೇಕ ನುಡಿಯಿಲ್ಲ 'ನಮ್ಮಮ್ಮ ಶಾರದೆ ಉಮಾ ಮಹೇಶ್ವರಿ' ಎಂಬ ಕೀರ್ತನೆಯಲ್ಲಿ ಉಮೆಯೊಡನೆ ಸಮೀಕೃತಳಾಗಿ ಶಾರದೆ ಬಂದಿದ್ದಾಳೆ.

'ಮಹಾಕೃತಿ' ಎಂಬ ಭಾಗದಲ್ಲಿ ಸಾಹಿತ್ಯ ಪ್ರಪಂಚದಲ್ಲಿ ಯಾವುದಕ್ಕೆ ಮಹಾಕೃತಿ ಎನ್ನಬೇಕು? ಎನ್ನುವ ಪ್ರಶ್ನೆಗೆ ಉತ್ತರವನ್ನು ಹುಡುಕುವ ಪ್ರಯತ್ನವನ್ನು ಮಾಡಲಾಗಿದೆ. ಮಹಾಕೃತಿಯ ಶೋಧದಲ್ಲಿ ತೊಡಗಿರುವಾಗ ಇದಿರಾಗುವ ಹಲವು ಬಗೆಯ ವಿಚಾರಧಾರೆಗಳು. ವಿಶ್ಲೇಷಣೆಗಳು ಮುಂತಾದವನ್ನು ಅವರು ಇಲ್ಲಿ ಚರ್ಚಿಸಿದ್ದಾರೆ. ಭಾರತೀಯ ಮತ್ತು ಪಾಶ್ಚಾತ್ಯ ಸಾಹಿತ್ಯಗಳ ಪ್ರಾಚೀನ ಪರಂಪರೆಯಿಂದ ಬಂದಿರುವ ಅಭಿಮತಗಳು, ಅವುಗಳಿಗೆ ಪ್ರತಿಕ್ರಿಯೆಯಾಗಿ ಅಭಿವ್ಯಕ್ತವಾದ ಕೆಲವು ಅರ್ವಾಚೀನ ಸಾಹಿತ್ಯ ಮೀಮಾಂಸಕರ ಅಭಿಪ್ರಾಯಗಳು – ಇವೆಲ್ಲವನ್ನೂ ಲೇಖಕರು ಒರೆಗೆ ಹಚ್ಚಿದ್ದಾರೆ. ಪ್ರಾಸಂಗಿಕವಾಗಿ ಕೃತಿ

ಎಂದರೇನು? ಅದರ ಸ್ವರೂಪವೇನು? ಕೃತಿಕಾರ ಅಥವಾ ವಿಶಾಲವಾದ ಅರ್ಥದಲ್ಲಿ ಕವಿಯ ಲಕ್ಷಣವೇನು, ಉತ್ಕೃಷ್ಟ ಕೃತಿಯೆಂದು ಯಾವುದನ್ನು ಕರೆಯಬೇಕು? ಸತ್ಕೃತಿಯಿಂದ ಮಹಾಕೃತಿಯವರೆಗಿನ ಶ್ರೇಣಿಯಲ್ಲಿ ನಡುವಿನ ಹಂತಗಳೇನಾದರೂ ಇರುವವೇ? ಅದನ್ನು ಗುರುತಿಸುವುದು ಹೀಗೆ? ಎಂಬಿತ್ಯಾದಿ ಪ್ರಶ್ನೆಗಳಿಗೂ ಅವರು ಉತ್ತರಿಸಿದ್ದಾರೆ. ವಾಲ್ಮೀಕಿ, ಕಾಳಿದಾಸ, ಭಾಮಹ, ದಂಡಿ, ವಾಮನ, ಭಟ್ಟತೌತ ಮುಂದಿನ ಭಾರತೀಯ ಮೀಮಾಂಸಕರು; ಡಬ್ಲ್ಯೂ. ಎಚ್. ಹಡ್ಸನ್, ಟಿ. ಎಸ್. ಎಲಿಯಟ್, ಪ್ಲೇಟೋ, ಐ. ಎ. ರಿಚರ್ಡ್ಸ್ ಮೊದಲಾದ ಪಾಶ್ಚಾತ್ಯ ವಿದ್ವಾಂಸರುಗಳ ವಿಚಾರಧಾರೆಗಳನ್ನು ಲೇಖಕರು ಇಲ್ಲಿ ಹದವಾಗಿ ನೇಯ್ದಿದ್ದಾರೆ. ಶ್ರೀವಿಜಯ, ನಾಗವರ್ಮ ಮುಂತಾದ ಕನ್ನಡದ ಪ್ರಾಚೀನ ಲಾಕ್ಷಣಿಕರು ಸಂಸ್ಕೃತ ಕಾವ್ಯಮೀಮಾಂಸಕರು ಪ್ರತಿಪಾದಿಸಿರುವ ಕಾವ್ಯ ಲಕ್ಷಣಗಳನ್ನು ಬಹುಮಟ್ಟಿಗೆ ಒಪ್ಪಿಕೊಂಡರೂ ಕೆಲವೆಡೆಗಳಲ್ಲಿ ತಮ್ಮದೇ ಆದ ಸ್ವತಂತ್ರ ಚಿಂತನೆಯ ಹೊಳಹುಗಳನ್ನೂ ಮಿನುಗಿಸಿದ್ದಾರೆ ಎಂಬುದನ್ನು ಮುಗಳಿಯವರು ತೋರಿಸಿಕೊಟ್ಟಿದ್ದಾರೆ. ಕನ್ನಡವು ಸಂಸ್ಕೃತದ ಸಾರವನ್ನು ಹೀರಿಕೊಂಡರೂ ಅನುಕರಣೆಯಂತಹ ಸುಲಭ ವಿಧಾನಕ್ಕೆ ಬದಲಾಗಿ ಅನುಸಂಧಾನದ ಮಾರ್ಗದ ಮೂಲಕ ತನ್ನ ಸ್ವತಂತ್ರವಾದ ಅಸ್ತಿತ್ವವನ್ನು ಪ್ರಾಚೀನ ಕಾಲದಲ್ಲಿಯೇ ಉಳಿಸಿಕೊಳ್ಳಲು ಹೇಗೆ ಶಕ್ತವಾಯಿತು ಎಂಬ ವಿಷಯವನ್ನು ಕುರಿತು ಅನೇಕ ಚಿಂತಕರು ಇತ್ತೀಚಿನ ವರ್ಷಗಳಲ್ಲಿ ಸಾಕಷ್ಟು ವಿಶ್ಲೇಷಿಸಿದ್ದಾರೆ. ಆದರೆ ಡಾ. ಮುಗಳಿರವರು ಎರಡು ದಶಕಗಳಿಗೂ ಹಿಂದೆಯೇ ಈ ಕುರಿತು ಅದೆಷ್ಟು ತೀವ್ರವಾಗಿ ಚಿಂತಿಸಿದ್ದಾರೆಂಬುದಕ್ಕೆ ಈ ಮಾತುಗಳು ಸಾಕ್ಷಿಯಾಗಿವೆ. ಮಹಾಕೃತಿಯಾಗಲೀ ಮೇರು ಕೃತಿಯೇ ಆಗಲಿ, ಅದು ನಮಗೆ ನೀಡುವ ಭವ್ಯತೆಯ ರಸಾನುಭವವು ಮತ್ತೆ ಮತ್ತೆ ನೆನೆಯುವಂಥದೂ, ಅರಿಯದಂತೆ ನಮ್ಮ ಚೇತನದಲ್ಲಿ ಒಳಹೊಕ್ಕು ಯಾವಾಗಲೂ ಬೆಳಗುವಂಥದೂ ಆಗಿರುತ್ತದೆ ಮಹಾಕವಿಯಾದವನು ಯಾವ ಭಾಷೆಯಲ್ಲಿ ಯಾವುದೇ ನೆಲೆಯಿಂದ ಬರೆಯಲಿ, ಅವನ ಕೃತಿಯಲ್ಲಿ ವಿಶ್ವಪ್ರಜ್ಞೆ, ವಿಶ್ವಹಿತ ಇವು ಪ್ರಧಾನವಾಗಿರುವುದರಿಂದ ಅವನು ವಿಶ್ವಕವಿಯಾಗಿ ಅಜರಾಮರನಾಗುತ್ತಾನೆ. ಮಹಾಕೃತಿ ವಿಸ್ತಾರವಾದ ಮಹಾಕಾವ್ಯವಾಗಿರಬಹುದು, ಅಡಕವಾದ ಭಾವಗೀತೆಯಾಗಿರಬಹುದು, ಎರಡು ಮೂರು ಸಾಲಿನ ಕವನವಾಗಿರಬಹುದು, ವಿಶ್ವಸಾಹಿತ್ಯಕ್ಕೆ ಅದರ ಕಾಣಿಕೆ ಚಿರಂತನವಾಗುತ್ತದೆ. ಇವು ಮಹಾಕಾವ್ಯ ಕುರಿತಂತೆ ಮುಗಳಿರವರು ಆಡಿರುವ ಮೌಲಿಕ ಮಾತುಗಳಾಗಿವೆ.

ವಿಮರ್ಶೆಯೆಂದರೆ ನಿರ್ಮಿತಿ ಪ್ರಧಾನವಾದ ಸಾಹಿತ್ಯವನ್ನು ಕುರಿತು ಸಹೃದಯನ ಸಮಗ್ರ ಪ್ರತಿಕ್ರಿಯೆ. ಸಹೃದಯನೆಂದರೆ ಎಲ್ಲ ಚೆಲುವಿಗೆ ಎದೆಯನ್ನು ತೆರೆದಿಡಬಲ್ಲ ರಸಿಕ. ತಜ್ಞ ವಿಮರ್ಶಕ ಸಾಹಿತ್ಯವನ್ನು ಓದಿದಾಗ ಅವನ ಮನಸ್ಸಿನಲ್ಲಿ ಉಂಟಾಗುವ ಬಿಡಿಯಾದ ಮತ್ತು ಇಡಿಯಾದ ಪ್ರತಿಕ್ರಿಯೆ ವಿಮರ್ಶೆಯ ರೂಪ ತಾಳುತ್ತದೆ. ಇದು ಸೌಂದರ್ಯ ನಿಷ್ಠ, ಹಾರ್ದಿಕ ಮತ್ತು ಬೌದ್ಧಿಕ ಈ ಮೂರೂ ಅಂಶಗಳನ್ನು ಒಳಗೊಂಡಿರುತ್ತದೆ. ಸಾಹಿತ್ಯಕೃತಿಯಲ್ಲಿ ಮೂಡಿರುವ ವಿಶಿಷ್ಟ ಸೌಂದರ್ಯವನ್ನು ಅದು ಅರಿತುಕೊಳ್ಳುತ್ತದೆ. ಅದರಿಂದ ಉಂಟಾಗುವ ಆನಂದವನ್ನು ಅನುಭವಿಸುತ್ತದೆ. ಹಾಗೂ ಈ ಸೌಂದರ್ಯ – ಆನಂದಗಳ ಕಾರಣವನ್ನು ಕಂಡುಹಿಡಿಯುತ್ತದೆ. ಅವುಗಳಲ್ಲಿ ತಲೆದೋರಿರುವ ಕೊರತೆಯನ್ನು ಗುರುತಿಸುತ್ತದೆ. ಹೀಗೆ ಸಾಹಿತ್ಯವು ಕೃತಿ ಇಲ್ಲವೆ ಕ್ರಿಯೆಯಾದರೆ ವಿಮರ್ಶೆ ಅದಕ್ಕೆ ಪ್ರತಿಕ್ರಿಯೆ ಮತ್ತು ಪ್ರಕ್ರಿಯೆಯಾಗಿರುತ್ತದೆ. ಕ್ರಿಯೆಯ ಸಂದರ್ಭದಲ್ಲಿ ವಿಮರ್ಶೆ ಪ್ರತಿಕ್ರಿಯೆ, ಆದರೆ ತನ್ನಷ್ಟಕ್ಕೆ ಸೌಂದರ್ಯದ ಸೂತ್ರಗಳನ್ನು ಶೋಧಿಸುವ ಒಂದು ಪ್ರಕ್ರಿಯೆ. ಜೀವನದ ವಿಷಯದಲ್ಲಿ ಸಾಹಿತ್ಯವು ಒಂದು ಪ್ರತಿಕ್ರಿಯೆಯಿರುವಂತೆ ಸಾಹಿತ್ಯದ ಬಗ್ಗೆ ವಿಮರ್ಶೆ ಇನ್ನೊಂದು ಪ್ರತಿಕ್ರಿಯೆ, ಪ್ರತಿಕ್ರಿಯೆಗೆ ಪ್ರತಿಕ್ರಿಯೆಯಿದ್ದಂತೆ, ಸಾಹಿತ್ಯವು ಜೀವನದಿಂದ ಸ್ಪಂದನ ಹೊಂದಿ ಸೃಷ್ಟಿಯಾಗುತ್ತದೆ, ವಿಮರ್ಶೆ ಸಾಹಿತ್ಯದಿಂದ ಪ್ರತಿಸ್ಪಂದನ ಹೊಂದಿ ರಚಿತವಾಗುತ್ತದೆ. ಮ್ಯಾಥ್ಯೂ ಅರ್ನಾಲ್ಡನ ಪ್ರಕಾರ ಸಾಹಿತ್ಯವು ಜೀವನ ವಿಮರ್ಶೆಯಾದರೆ, ವಿಮರ್ಶೆ ಈ ಜೀವನ ವಿಮರ್ಶೆಯ ವಿಮರ್ಶೆಯಾಗುತ್ತದೆ, ಎರಡರಲ್ಲಿ ಭೇದವಿಷ್ಟೆ. ಸಾಹಿತ್ಯದಲ್ಲಿ ಕಾಣಬರುವ ಜೀವನ ವಿಮರ್ಶೆ ಪ್ರಧಾನವಾಗಿ ಅಂತಃಸ್ಫುರಣರೂಪದ್ದು, ವಿಮರ್ಶೆಯಲ್ಲಿ ಕಾಣ ದೊರೆಯುವ ವಿಮರ್ಶೆ ಪ್ರಧಾನವಾಗಿ ಆಸ್ವಾದ ಮತ್ತು ಪೃಥಕ್ಕರಣ ರೂಪದ್ದು. ಒಂದರಲ್ಲಿ ಸೌಂದರ್ಯ ಸೃಷ್ಟಿಯಿದ್ದರೆ ಇನ್ನೊಂದರಲ್ಲಿ ಸೌಂದರ್ಯ ಭುಕ್ತಿಯಿರುತ್ತದೆ. ಸಾಹಿತ್ಯ ಮತ್ತು ವಿಮರ್ಶೆ ಇವೆರಡಕ್ಕೂ ಪ್ರತಿಭೆ ಅವಶ್ಯವೆಂದೂ ಒಂದು ಕಾರಯಿತ್ರಿ, ಇನ್ನೊಂದು ಭಾವಯಿತ್ರಿ ಎಂದೂ ರಾಜಶೇಖರನು ಹೇಳಿರುವುದುಂಟು ಒಂದರಲ್ಲಿ ಪ್ರತಿಭೆ ಕೃತಿ ನಿರ್ಮಾಣ ಮಾಡಿಸುತ್ತದೆ. ಇನ್ನೊಂದರಲ್ಲಿ ಅದರ ರಸಾಸ್ವಾದ ಮಾಡಿಸುತ್ತದೆ. ಪ್ರತಿಭೆಗೆ ಈ ವ್ಯಾಪಕವಾದ ಅರ್ಥವನ್ನು ಕಲ್ಪಿಸಿರುವುದು ಸರಿಯೆ. ಕವಿ ಮತ್ತು ಸಹೃದಯ ಇವರು ಸರಸ್ವತಿಯ ತತ್ವ ಎಂದು ಅಭಿನವಗುಪ್ತನು ಹೇಳಿದ್ದಾನೆ. ಸರಸ್ವತಿಯ ಮೂಲ ಪ್ರೇರಣೆ ಇವರಿಬ್ಬರಲ್ಲಿಯೂ ಇರುತ್ತದೆ ಎಂದು ಅವನ ಅಭಿಪ್ರಾಯವಿರಬೇಕು. ಮೂಲತಃ ಇಬ್ಬರೂ ಸರಸ್ವತಿಯ ಒಕ್ಕಲಾದರೂ ಕಾರ್ಯತಃ ಇಬ್ಬರೂ ಬೇರೆಯೆಂಬುದನ್ನು ಅರಿತಿರಬೇಕು. ಕವಿ ರಸಸೃಷ್ಟಿಯನ್ನು ಮಾಡುತ್ತಾನೆ. ಸಹೃದಯನು ರಸಾಸ್ವಾದವನ್ನು ಮಾಡುತ್ತಾನೆ.

ಸಾಹಿತ್ಯ ವಿಮರ್ಶೆಯ ಸಮಗ್ರ ಪ್ರತಿಕ್ರಿಯೆಯಲ್ಲಿ ಪ್ರಮುಖವಾಗಿ ನಾಲ್ಕು ಅಂಗಗಳಿರುತ್ತವೆ. ರಸಗ್ರಹಣ, ರಸಾವಿಷ್ಕರಣ, ವಿಶ್ಲೇಷಣ ಮತ್ತು ಮೂಲ್ಯನಿರ್ಣಯ. ಯಾವುದೇ ಸಾಹಿತ್ಯ ಕೃತಿಯನ್ನು ಓದಿದೊಡನೆ ಸಹೃದಯನು ಅದರ ರಸಗ್ರಹಣ ಮಾಡುತ್ತಾನೆ, ಅಂದರೆ ಅದರ ಸೌಂದರ್ಯದಿಂದ ತನಗೆ ಉಂಟಾಗುವ ಆನಂದವನ್ನು ಅನುಭವಿಸುತ್ತಾನೆ.

ರಸವೆಂದರೇನು ಎಂಬುದರ ಚರ್ಚೆ ಇಲ್ಲಿ ಅಪ್ರಕೃತವಾದರೂ ಸ್ಪಷ್ಟತೆಗಾಗಿ ಒಂದೆರಡು ಮಾತುಗಳನ್ನು ಹೇಳಬೇಕು ಭರತನಾಟ್ಯಶಾಸ್ತ್ರದ ಕಾಲದಿಂದ ರಸವು ಒಂದು ಸಿದ್ಧಾಂತವಾಗಿ ವಿಮರ್ಶೆ ಪ್ರಪಂಚಕ್ಕೆ ಭಾರತೀಯ ಕೊಡುಗೆಯಾಗಿ ಮೆರೆದಿದೆ. ಅದಕ್ಕೆ ವ್ಯಾಪಕವಾಗಿ ಸೌಂದರ್ಯ, ಆನಂದ ಎಂಬ ಅರ್ಥಗಳೂ ರೂಢವಾಗಿ ಬಂದಿವೆ. ನಾವು ಇಲ್ಲಿ ವ್ಯಾಪಕವಾದ ಅರ್ಥದಲ್ಲಿಯೇ ಅದನ್ನು ಬಳಸಿರುತ್ತೇವೆ. ಈ ವ್ಯಾಪಕವಾದ ಅರ್ಥದಲ್ಲಿ ವಿಶಿಷ್ಟವಾದ ಅರ್ಥವು ಕೆಲವು ಸಲ ಒಳಗೊಳ್ಳಬಹುದು. ಸಾಹಿತ್ಯ ವಿಮರ್ಶೆಯಲ್ಲಿ ಅತ್ಯಂತ ಸ್ವಾಭಾವಿಕವಾದ ಮೊದಲನೆಯ ಅಂಗವೆಂದರೆ ರಸಗ್ರಹಣ. ಲೇಖಕನು ಸ್ವಂತಕ್ಕೆ ರಸಾನುಭವ ಹೊಂದಿಯೇ ಹೇಗೆ ತನ್ನ ಅಭಿವ್ಯಕ್ತಿಗೆ ತೊಡಗುತ್ತಾನೋ ಹಾಗೆ ವಿಮರ್ಶಕನು ಆ ರಸಾನುಭವವನ್ನು ತಾನು ಸ್ವಂತವಾಗಿ ಪಡೆದು ಅಂದರೆ ರಸಗ್ರಹಣ ಮಾಡಿಯೇ ವಿಮರ್ಶೆಯ ಕಾರ್ಯಕ್ಕೆ ತೊಡಗುತ್ತಾನೆ. ಸ್ವಂತಕ್ಕೆ ರಸಗ್ರಹಣ ಮಾಡದೆ ಬೇರೆಯವರಿಗಾಗಿ ರಸಗ್ರಹಣ ಸಾಧ್ಯವಿಲ್ಲ. ವಿಮರ್ಶಕನು ತಾನು ಕಂಡುಂಡ ರಸವನ್ನು ಬೇರೆಯವರಿಗೆ ತೆರೆದು ತೋರಿಸುತ್ತಾನೆ, ಒಳ ಅರ್ಥವನ್ನು ವಿವರಿಸುತ್ತಾನೆ. ಇದಾದ ಮೇಲೆ ಅವನು ಆ ಕೃತಿಯ ವಿವಿಧಾಂಗಗಳನ್ನು ವಿಶ್ಲೇಷಿಸಿ ಗುಣದೋಷ ಪರೀಕ್ಷಣವನ್ನು ಮಾಡುತ್ತಾನೆ. ಕೊನೆಗೆ ಅದರ ಮೂಲ್ಯ ನಿರ್ಣಯವನ್ನು ಕೊಗೊಳ್ಳುತ್ತಾನೆ. ಅದರ ಕಾರಣ ಮೀಮಾಂಸೆ ಮಾಡುತ್ತಾನೆ. ಸಾಹಿತ್ಯ ವಿಮರ್ಶೆಯ ಈ ಸಮಗ್ರ ಪ್ರತಿಕ್ರಿಯೆಯಲ್ಲಿಯೆ ಅದರ ಎಲ್ಲ ಉದ್ದೇಶವು ಅಡಕವಾಗಿದೆ. ಸಾಹಿತ್ಯದಿಂದ ಸ್ವಂತಕ್ಕೆ ದೊರೆಯುವ ಹಿಗ್ಗನ್ನು ಬೇರೆಯವ–ರಿಗೆ ಹಂಚುವುದು, ಹಿಗ್ಗು ಆಗಿರುವುದು ಏತರಿಂದ ಎಂಬುದನ್ನು ಸಾಧ್ಯವಿದ್ದಷ್ಟು ವಿವರಿಸುವುದು, ಅದನ್ನು ತೂಗಿ ನೋಡಿ ಬೆಲೆ ಕಟ್ಟುವುದು ಇದೇ ಸಾಹಿತ್ಯ ವಿಮರ್ಶೆಯ ಉದ್ದೇಶವಾಗಿದೆ.

ಸಾಹಿತ್ಯ ವಿಮರ್ಶೆಯ ಉದ್ದೇಶಕ್ಕೆ ಅನುಗುಣವಾಗಿ ಪ್ರಯೋಜನವಿರುತ್ತದೆ. ಮುಖ್ಯವಾದ ಪ್ರಯೋಜನವೆಂದರೆ ರಸಗ್ರಹಣದಿಂದ ಸಾಹಿತ್ಯ ರಸಿಕನ ಮೇಲಾಗುವ ಒಳ್ಳೆಯ ಸಂಸ್ಕಾರ, ಅವನಲ್ಲಿ ಉಂಟಾಗುವ ಒಳ್ಳೆಯ ಅಭಿರುಚಿ. ಸಂಪನ್ನವಾದ ಮತ್ತು ಪರಿಪೂರ್ಣವಾದ ಜೀವನಕ್ಕೆ ಸಾಹಿತ್ಯ ರಸಿಕತೆ ಅವಶ್ಯಕ ಎಂಬ ಅರಿವು ಒಳ್ಳೆಯ ಸಂಸ್ಕಾರವನ್ನು ನೀಡುತ್ತದೆ. ಯಾವ ಕೃತಿಯನ್ನು ಯಾಕೆ ಮೆಚ್ಚಬೇಕು, ಹೇಗೆ ಮೆಚ್ಚುಗೆ ಬೆಳೆಸುತ್ತದೆ. ಸಾಹಿತ್ಯ ರಸಿಕನು ತಜ್ಞ ವಿಮರ್ಶಕನೇ ಆಗಿರುವಲ್ಲಿ ಅವನ ಸಂಸ್ಕಾರ ಮತ್ತು ಅಭಿರುಚಿಗಳು ಇನ್ನೂ ಮೇಲ್ಮಟ್ಟವನ್ನು ಮುಟ್ಟುತ್ತವೆ. ಅವನ ಸಾಹಿತ್ಯಕ ನಿರ್ಣಯಗಳಿಗೆ ಮತ್ತು ಅಭಿಪ್ರಾಯಗಳಿಗೆ ಹೆಚ್ಚಿನ ಮಹತ್ವ ಬರುತ್ತದೆ. ಹಲವಾರು ಸಲ ಎಂಥ ಸಾಹಿತ್ಯ ರಸಿಕರೂ ವಿಕಾರವಶರಾಗಿ ಅಭಿಪ್ರಾಯಗಳನ್ನು ಮಾಡಿಕೊಳ್ಳುತ್ತಾರೆ ರಾಗದ್ವೇಷಗಳ ಝಳವು ಅವರನ್ನು ತಾಕುತ್ತದೆ. ಇದರಿಂದ ಅವರ ಅಭಿಪ್ರಾಯಗಳು ನಿಷ್ಪಕ್ಷಪಾತವಾಗಲಾರವು; ಅಲ್ಲದೆ ಮೂಲ್ಯ ನಿರ್ಣಯಗಳು ತಲೆಕೆಳಗಾಗಬಹುದು. ಸರಿಯಾದ ಸಾಹಿತ್ಯ ವಿಮರ್ಶೆ ಸಮತೂಕದ ಮೂಲ್ಯ ನಿರ್ಣಯಕ್ಕೆ ಸಹಾಯ ಮಾಡುತ್ತದೆ. ಒಳ್ಳೆಯ ಸಾಹಿತ್ಯವನ್ನು ಎತ್ತಿ ಹಿಡಿಯುತ್ತಲೆ ಅದು ಒಳ್ಳೆಯದಲ್ಲದ ಸಾಹಿತ್ಯವನ್ನು ಕೈ ಬಿಡುತ್ತದೆ. ಈ ಸಂಪ್ರದಾಯ ಬೆಳೆದಂತೆ ಅಸತ್ ಸಾಹಿತ್ಯ ಅಶ್ಲೀಲ ಸಾಹಿತ್ಯ ಇವುಗಳ ಮೇಲೆ ಸದಭಿರುಚಿಯ ಸ್ವಯಂಶಾಸನದ ಮೂಲಕ ತಾನಾಗಿ ನಿಯಂತ್ರಣವು ಏರ್ಪಡುತ್ತದೆ ಯಾವುದೇ ಬಾಹ್ಯನಿಯಮ ಇಲ್ಲವೆ ನಿಯಂತ್ರಣದಿಂದ ಸದಭಿರುಚಿ ಬೆಳೆಯಲಾರದು.

ಭಾರತೀಯ ಪರಂಪರೆಯಲ್ಲಿ ವಿಮರ್ಶಕನನ್ನು ರಸಿಕ, ರಸಜ್ಞ, ಸಹೃದಯ ಎಂಬ ಸಾರ್ಥಕ ಪದಗಳಿಂದ ಕರೆಯುವ ರೂಢಿಯಿದೆ. ಈ ಪದಗಳ

ಸರಿಯಾದ ಆಶಯವನ್ನು ತಿಳಿದುಕೊಂಡರೆ ವಿಮರ್ಶಕನ ಮನೋಧರ್ಮವು ಹೇಗಿರಬೇಕು ಎಂಬುದು ಮನದಟ್ಟಾಗುತ್ತದೆ. ವಿಮರ್ಶಕನು ಸಾಹಿತ್ಯರಸದ ಅಂದರೆ ವಿಶಾಲವಾದ ಅರ್ಥದಲ್ಲಿ ಸಾಹಿತ್ಯದಲ್ಲಿ ಮೂಡಿದ ಸೌಂದರ್ಯದ ಆನಂದವನ್ನು ಸವಿಯುವಂಥವನು ಅಂದರೆ ರಸಿಕನು. ರಸವನ್ನು ಅರಿತು ಸವಿಯುವವನು ಅಂದರೆ ರಸಜ್ಞನು. ರಸಿಕ, ರಸಜ್ಞ ಈ ಪದಗಳಲ್ಲಿ ಮೂಲತಃ ಭೇದವಿಲ್ಲ ವಿಮರ್ಶಕನು ಸಹೃದಯನಾಗಿರುತ್ತಾನೆ. ಎಂದರೇನು? ಇದನ್ನು ವಿಸ್ತಾರವಾಗಿ ತಿಳಿದುಕೊಳ್ಳುವುದು ಫಲಪ್ರದವಾಗುತ್ತದೆ; ಈ ಪದದ ಹುಟ್ಟನ್ನು ನೋಡಿದರೆ ಸಮಾನವಾದ ಹೃದಯವುಳ್ಳವನೇ ಸಹೃದಯನು ಎಂದಾಗುತ್ತದೆ. ಕವಿಯ ಭಾವನೆಗಳೇ ಸಹೃದಯದ ಭಾವನೆಗಳು, ಕವಿಯ ಹೃದ್ಗತವೇ ಸಹೃದಯನ ಹೃದ್ಗತವು ಎಂದರ್ಥವೇ? ಹಾಗಲ್ಲ ಎಂದು ಕೆಳಗಿನಂತೆ ವಿವರಿಸಲಾಗಿದೆ. 'ಕಾವ್ಯವನ್ನು ಓದುವಾಗ, ಕವಿಯ ಹೃದಯದೊಂದಿಗೆ ಇವನ ಹೃದಯವೂ ಸಮತಾನವಾಗಿ ಮಿಡಿಯುತ್ತದೆ. ಅವನ ಅನುಭವಗಳಲ್ಲಿ ಇವನೂ ಪಾಲುಗಾರನಾಗುತ್ತಾನೆ. ಅವನ ಆಶಯವನ್ನು, ಇಂಗಿತವನ್ನು ಸಹಾನುಭೂತಿಯಿಂದ ಅರಿಯುತ್ತಾನೆ. ಸಮಾನವಾದ ಹೃದಯವೆಂದರೆ ಸಮತಾನವಾದ ಮಿಡಿತ, ಸಹಾನುಭೂತಿ ಎಂಬ ಈ ವಿವರಣೆ ಸರಿಯಾಗಿದೆ. ವಿಮರ್ಶಕನು ಸಹೃದಯನಾಗಿ ತನಗೆ ವಿಶಿಷ್ಟವಾದ ಪ್ರತಿಭೆಯನ್ನು ವ್ಯುತ್ಪತ್ತಿ ಅಭ್ಯಾಸಗಳಿಂದ ಕುದುರಿಸಿಕೊಳ್ಳಬೇಕು. ವಿಶಾಲ ಹೃದಯನಾಗಿ ಸೂಕ್ಷ್ಮ ಸಂವೇದಿಯಾಗಿ ಎಲ್ಲ ಬಗೆಯ ಸಾಹಿತ್ಯ ಸೌಂದರ್ಯಕ್ಕೆ ಸಂಮುಖನಾಗಬೇಕು, ಮತ್ಸರ ರಹಿತನಾಗಬೇಕು, ಪೂರ್ವಗ್ರಹ – ಪಕ್ಷಪಾತಗಳಿಂದ ದೂರ ನಿಲ್ಲಬೇಕು. ಅವನಲ್ಲಿ ಸಾಹಿತ್ಯ ಮತ್ತು ವಿಮರ್ಶೆಗಳ ಸಾಮಾನ್ಯಸ್ವರೂಪದ ಜ್ಞಾನ, ವಿವಿಧ ಸಾಹಿತ್ಯ ಪ್ರಕಾರಗಳ ತಂತ್ರಜ್ಞಾನ, ಲೋಕಾನುಭವ, ಸ್ವಾನುಭವ, ಜಾಗತಿಕ ಶ್ರೇಷ್ಠ ಕೃತಿಗಳ ನಿಕಟಪರಿಚಯ, ಬಹುಶ್ರುತತ್ವ ಪರಿಪಕ್ವ ಶಾಸ್ತ್ರಜ್ಞಾನ, ವಿಚಾರವಂತಿಕೆ ಮತ್ತು ವಿವೇಕ ಸಂಪತ್ತಿ ಇವು ಮನೆಮಾಡಬೇಕು. ಕವಿ ಅಥವಾ ಲೇಖಕನಿಗೆ ಅವಶ್ಯವಿರುವಂತೆ ಕಾಲಮಾನದ ಅರಿವು ಅವನಲ್ಲಿ ನಿಚ್ಚಳವಾಗಿರಬೇಕು. ಯಾವೊಂದು ಕಾಲದಲ್ಲಿಯೂ ಆಗಾಗ ತಲೆದೋರುವ ನವೋನವ ಪ್ರಯೋಗಗಳಿಗೆ ಅವನದು ತೆರೆದೆದೆಯಾಗಬೇಕು, ಅವುಗಳಲ್ಲಿಯ ಗುಣವನ್ನು ಶಾಶ್ವತ ಮೂಲ್ಯಗಳ ಮತ್ತು ಯುಗಧರ್ಮದ ಮಾನದಂಡದಿಂದ ತೂಗಿ ಮೆಚ್ಚಬೇಕು, ಕುಂದು ಕೊರತೆಗಳನ್ನು ಎತ್ತಿ ತೋರಬೇಕು. ಗುಣದೋಷ ನಿರೂಪಣದಲ್ಲಿ ಮತ್ತು ಸ್ಥಾನಮಾನ ನಿರ್ಣಯದಲ್ಲಿ ಅವನು ನಿಷ್ಪಕ್ಷಪಾತಿ, ನಿರ್ಭೀತ ಮತ್ತು ಉನ್ನತನಾಗಿರಬೇಕು. ಅವನು ವಿಮರ್ಶೆವ್ಯಕ್ತಿತ್ವದಿಂದ ಪ್ರಭಾವಿತವಾದರೂ ವೈಯಕ್ತಿಕವಾದ ರಾಗದ್ವೇಷಗಳಿಂದ ಮತ್ತು ಪೂರ್ವಗ್ರಹಗಳಿಂದ ಕಲುಷಿತವಾಗಕೂಡದು.

ವಿಮರ್ಶಕನ ಮನೋಧರ್ಮದಲ್ಲಿ ಕವಿತ್ವನಿರ್ಮಿತಿಯ ಶಕ್ತಿಯಿದ್ದರೆ ಅವನ ವಿಮರ್ಶೆ ಸಮರ್ಪಕವೂ ಸಫಲವೂ ಆಗುವುದೆಂಬ ಅಭಿಪ್ರಾಯವು ಹಿಂದಿನಿಂದಲೂ ಪ್ರಚಲಿತವಾಗಿದೆ. 'ಕವಿಯೇ ಕವಿಯನ್ನು ಅರಿವ' ಎಂಬುದು ಈ ಅಭಿಪ್ರಾಯ ಸೂಚಕವಾದ ಸೂತ್ರವೆನ್ನಬಹುದು. ಕನ್ನಡ ಕವಿಗಳಲ್ಲಿ ಪಂಪನು 'ಕವಿತಾ ರಹಸ್ಯಮಂ ಸತ್ಯವಿಯರಿಗುಂ' ಎಂದು ಹೇಳಿರುವಲ್ಲಿ ಈ ಸೂತ್ರವು ಪದ್ಯರೂಪ ತಾಳಿದೆ. ಕಾವ್ಯ ನಿರ್ಮಿತಿ ಪ್ರಕ್ರಿಯೆಯ ಬಗ್ಗೆ ಕವಿಗೆ ಸ್ವಾನುಭವ ಮತ್ತು ಪರಿಜ್ಞಾನಗಳು ಇರುವುದರಿಂದ ಯಾವುದೇ ಕವಿತೆಯ ರಹಸ್ಯವನ್ನು ಅವನು ಸರಿಯಾಗಿ ಅರಿಯುತ್ತಾನೆ. ಮೆಚ್ಚಬೇಕಾದ ಅಂಶಗಳನ್ನು ಬೆರಳಿಟ್ಟು ತೋರಿಸುತ್ತಾನೆ. ನಿರ್ಮಿತಿಗೆ ಚ್ಯುತಿಯುಂಟಾಗಿದ್ದರೆ ಅದನ್ನೂ ಕಂಡು ಹಿಡಿಯುತ್ತಾನೆ. ಸಹೃದಯ ಇಲ್ಲವೆ ವಿಮರ್ಶಕನು ಸ್ವಂತ ಕವಿಯಾಗಿರದಿದ್ದರೆ ಅವನು ನಿರ್ಮಿತಿ ಪ್ರಕ್ರಿಯೆಯನ್ನು ಕೇವಲ ಊಹೆಯಿಂದ ತಿಳಿದುಕೊಳ್ಳಬೇಕಾಗುತ್ತದೆ. ಸಾಹಿತ್ಯ ವಿಮರ್ಶೆಯಲ್ಲಿ ವೈಯಕ್ತಿಕ ರಸಾನುಭವಕ್ಕೆ ಮಹತ್ವವಿದೆಯೆಂದ ಮೇಲೆ ವಿವಿಧ ಪ್ರತಿಕ್ರಿಯೆಗಳು, ಅಭಿಪ್ರಾಯಗಳು ಹುಟ್ಟುವುದು ಸ್ವಾಭಾವಿಕ, ಇಂಥ ಭಿನ್ನಾಭಿಪ್ರಾಯಗಳಿಗೆ ಅವಕಾಶವಿದೆ. ಭಿನ್ನದೃಷ್ಟಿಕೋನಗಳಿಗೆ ಎಡೆಯಿದೆ. ಹಾಗೆ ಇದ್ದರೇನೇ ವಿಮರ್ಶೆ ಜೀವಂತವಾಗಿದೆ, ಸಾಹಿತ್ಯ ಪ್ರಗತಿಪಥದಲ್ಲಿದೆ ಎಂದು ತಿಳಿಯಬೇಕು. ಯಾವ ಸಮಾಜವು ಅದಕ್ಕೆ ಪೂರ್ತಿಯಾದ ಅವಕಾಶವನ್ನು ಕಲ್ಪಿಸಿಕೊಡುತ್ತದೋ ಅದು ಜೀವಂತ ಸಮಾಜ, ಸುಸಂಸ್ಕೃತ ಸಮಾಜ ಎಂದು ಹೇಳಬಹುದು. ಯಾವ ಸಮಾಜವು ಈ ಅವಕಾಶವನ್ನು ಅಲ್ಲಗಳೆಯುವುದೋ ಅದು ಖಂಡಿತವಾಗಿ ಹಿಂದುಳಿದ ಸಮಾಜ, ಮುಂದುವರಿದಂತೆ ತೋರಿದರೂ ಅದು ಸಂಸ್ಕೃತಿಯ ವಿಷಯದಲ್ಲಿ ಹಿಂದುಳಿದ ಸಮಾಜವೆಂದು ಹೇಳಬಹುದು. ಆದರೆ ಈ ಭಿನ್ನಾಭಿಪ್ರಾಯಗಳು ಹೇಗೆ ಹುಟ್ಟುತ್ತವೆ? ಇವು ಒಂದೇ ಕೃತಿಯ ವಿಷಯದಲ್ಲಿ ತೀರ ವಿರುದ್ಧವಾದ ಅಭಿಪ್ರಾಯಗಳಾಗಿ ಏಕೆ ಪರಿಣಮಿಸುತ್ತವೆ? ಉತ್ತಮ ಲೇಖಕರ ಬಗ್ಗೆ ಸಹ ಪರಸ್ಪರ ವಿರುದ್ಧವಾದ ಅಭಿಪ್ರಾಯಗಳನ್ನು ವಿಮರ್ಶಕರು ವ್ಯಕ್ತಮಾಡಿರುವುದು ಕಂಡುಬರುತ್ತದೆ.

ಸಾಹಿತ್ಯದ ಆಶಯದಲ್ಲಿ, ಪ್ರಜ್ಞೆಯಲ್ಲಿ ಮತ್ತು ತಂತ್ರಶೈಲಿಗಳಲ್ಲಿ ಸಾಹಿತಿಗಳಲ್ಲಿ ಪ್ರಾಮಾಣಿಕ ಭೇದಗಳಿರುವುದು ತೀರ ಸಹಜ. ವ್ಯಕ್ತಿತ್ವ ಪ್ರಧಾನವಾದ ಇಂದಿನ ಯುಗದಲ್ಲಿಯಂತೂ ಒಬ್ಬರ ಮನೋಧರ್ಮವು ಇನ್ನೊಬ್ಬರಂತೆ ಇರುವುದಿಲ್ಲ. ಸಮಾನ ಧರ್ಮಿಗಳೆಂದು ಈ ಕಾಲದಲ್ಲಿ ಕೆಲವರನ್ನು ಬೆರಳಿಟ್ಟು ಹೇಳುವುದೂ ಕಷ್ಟ. ಆದರೆ ಒಬ್ಬರು ಇನ್ನೊಬ್ಬರನ್ನು ಹೀಗಳೆಯುವ ಮತ್ತು ಹಿಂದಟ್ಟುವ ಪ್ರವೃತ್ತಿ ಸಾಹಿತಿಗಳಿಗಾಗಲಿ ವಿಮರ್ಶಕರಿಗಾಗಲೀ ಭೂಷಣವಲ್ಲ. ಎಲ್ಲ ಮನೋಧರ್ಮದ ಸಾಹಿತಿಗಳಲ್ಲಿ ಮೆಚ್ಚಬೇಕಾದ್ದನ್ನು ಮೆಚ್ಚುವ ಉದಾರ ರಸಿಕತೆಯನ್ನು ಅಂದರೆ ನಿಜವಾದ ಸಹೃದಯತೆಯನ್ನು ಇಂದಿನ ವಿಮರ್ಶಕರು ತಮ್ಮ ಮಾತು ಮತ್ತು ಕೃತಿಗಳಿಂದ ತೋರಿಸಬೇಕಾಗಿದೆ. ಜೊತೆಗೆ ತಮಗೆ ತೋರಿದ ರೀತಿಯಲ್ಲಿ ಆದರೆ ಮೇಲಿನ ಮಟ್ಟದಲ್ಲಿ ಯಾವ ಕೃತಿಯನ್ನು ಅವರು ಬಿಚ್ಚು ಮನಸ್ಸಿನಿಂದ ವಿಮರ್ಶಿಸಬೇಕು. ಕೆಲವು ಕಾಲ ಅದರ ಸಂಭಾವ್ಯ ಅಪಾಯಗಳಿಗೆ ತಲೆಯೊಡ್ಡಬೇಕು. ಈ ಅಗ್ನಿದಿವ್ಯದೊಳಗಿಂದ ಕನ್ನಡ ವಿಮರ್ಶೆ ಹಾಯ್ದು ಹೋಗುವವರೆಗೆ ಅದಕ್ಕೆ ಹೊಸ ಚೈತನ್ಯ ಬರಲಾರದು. ರಂ.ಶ್ರೀ. ಮುಗಳಿರವರ ಈ ಮಾತು ಎಲ್ಲ ಕಾಲಕ್ಕೂ ಸಲ್ಲುವಂತಹುದಾಗಿದೆ. ವಿಷಯದ ಆಯ್ಕೆ, ನಿರೂಪಣೆಯ ಸುಭಗತೆ, ವಿಸ್ತಾರವಾದ ವ್ಯಾಸಂಗದ ಬೆಂಬಲ ಇವೆಲ್ಲವುಗಳಿಂದ ಮುಪ್ಪುರಿಗೊಂಡ ಡಾ. ರಂ.ಶ್ರೀ. ಮುಗಳಿರವರ ವಿಮರ್ಶಾಕೃತಿಯನ್ನು ಗೌರೀಶ ಕಾಯ್ಕಿಣಿಯವರಂತಹ ವಿದ್ವಾಂಸರು 'ಇದೊಂದು ಅತ್ಯಂತ ಉಪಯುಕ್ತವೂ ಉದ್ಬೋಧಕವೂ ಆದ ವಿಮರ್ಶಾಶಾಸ್ತ್ರದ ಪ್ರವೇಶಿಕೆ; ಅಜ್ಞರಿಗೆ ದೀಪಿಕೆ, ವಿಶೇಷಜ್ಞರಿಗೆ ಸಲ್ಲಾಪಿಕೆ. ಇಷ್ಟು ಸಾರವತ್ತಾಗಿ, ಏನೂ ಒತ್ತು ಒತ್ತಾಗದಂತೆ ಸರಾಗವಾಗಿ ವಿವೇಚಿಸಿದ ಮುಗಳಿರವರ ಭಾವಯಿತ್ರೀ ಪ್ರತಿಭೆ ತನ್ನ ಅಚ್ಚು ಕಟ್ಟಾದ ಕಾರ್ಯಕೌಶಲ್ಯವನ್ನು ಶ್ಲಾಘನೀಯವಾಗಿ ಪ್ರಕಟಿಸಿದೆ' ಎಂದು ಹೊಗಳಿರುವುದು ಅತಿಶಯೋಕ್ತಿಯೇನಲ್ಲ. ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಡಾ. ಜಿ.ಎಸ್. ಶಿವರುದ್ರಪ್ಪನವರ 'ವಿಮರ್ಶೆಯ ಪೂರ್ವ ಪಶ್ಚಿಮ' ಹಾಗೂ ರಂ.ಶ್ರೀ. ಮುಗಳಿರವರ ವಿಮರ್ಶಾಕೃತಿಗಳು ಶ್ರೇಷ್ಠ ಸ್ಥಾನವನ್ನು ಪಡೆಯುತ್ತವೆ. ಹೀಗೆ ಕನ್ನಡ ಸಾಹಿತ್ಯದ ಸಾರಸ್ವತ ಲೋಕದಲ್ಲಿ ಪ್ರಾತಃಸ್ಮರಣೀಯರಾಗಿ ಗುರುತಿಸಿಕೊಂಡಿರುವ ಡಾ. ರಂ.ಶ್ರೀ. ಮುಗಳಿರವರು ಕನ್ನಡ ವಿಮರ್ಶಾಸಾಹಿತ್ಯಕ್ಕೆ ನೀಡಿರುವ ಕೊಡುಗೆ ಗಮನಾರ್ಹವಾದುದಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಕನ್ನಡ ಸಾಹಿತ್ಯ ಚರಿತ್ರೆ – ಡಾ. ರಂ.ಶ್ರೀ. ಮುಗಳಿ.
2. ಕನ್ನಡ ಸಾಹಿತ್ಯ ವಿಮರ್ಶೆಯ ತಾತ್ವಿಕ ವಿವೇಚನೆ – ಡಾ. ರಂ.ಶ್ರೀ. ಮುಗಳಿ.
3. ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು – ಡಾ. ರಂ.ಶ್ರೀ. ಮುಗಳಿ.